ಪತ್ರಿಕಾ ತುಣುಕುಗಳು
**PAPER CLIPPINGS**

8

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 22/1/21

# ಅತೃಪ್ತಿಯ ಹಂಚಿಕೆ

ಉವಾ 22/1/21

## ಅಸಮಾಧಾನ ಸ್ಫೋಟಿಸಿದ ಖಾತೆ । ಸಂಪುಟ ಸಭೆಗೂ ಹಲವರ ಗೈರು ಕೊಟ್ಟ ಖಾತೆಯಲ್ಲಿ ಕೆಲಸ ಮಾಡಲು ಸಿಎಂ ಯಡಿಯೂರಪ್ಪ ಸೂಚನೆ

**ಬೆಂಗಳೂರು:** ನೂತನ ಸಚಿವರಿಗೆ ಖಾತೆ ಹಂಚಿಕೆ ಮತ್ತು ಅದಲು-ಬದಲು ಬೆನ್ನಲ್ಲೇ ಬಿಜೆಪಿಯಲ್ಲಿ ಅಸಮಾಧಾನ ಸ್ಫೋಟಿಸಿದೆ. ಕೆಲವು ಸಚಿವರು ತಮಗೊಲ್ಲದ ಖಾತೆ ನೀಡಲಾಗಿದೆ ಎಂದು ಮುನಿಸಿಕೊಂಡಿದ್ದರೆ, ಇನ್ನು ಕೆಲವರು ತಮ್ಮ ಖಾತೆ ಕಸಿದುಕೊಂಡಿರುವುದಕ್ಕೆ ಅಸಮಾಧಾನ ಗೊಂಡಿದ್ದಾರೆ.

ಅಸಮಾಧಾನಿತರಲ್ಲಿ ವಲಸಿಗ ಸಚಿವರೇ ಹೆಚ್ಚಿರುವುದು ವಿಶೇಷ. ಅವರೆಲ್ಲರೂ ಹಿಂದಿನ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದ ಪತನಕ್ಕೆ ಕಾರಣವಾಗಿ ಯಡಿಯೂರಪ್ಪ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾದವರು. ಮೈತ್ರಿ ಸರ್ಕಾರದ 'ಅತೃಪ್ತ' ಶಾಸಕರು ಈಗಲೂ ಯಡಿಯೂರಪ್ಪ ಅವರ ಖಾತೆ ಹಂಚಿಕೆಯಲ್ಲಿ ಅತೃಪ್ತರಾಗಿದ್ದಾರೆ.

ಈ ನಡುವೆ ಸಿಎಂ ಯಡಿಯೂರಪ್ಪ ಸಚಿವರಿಗೆ, 'ಈಗ ಕೊಟ್ಟಿರುವ ಖಾತೆಗಳಲ್ಲಿ ಕೆಲಸ ಮಾಡಿ, ಮುಂದೆ ಸಂದರ್ಭ ಬಂದಾಗ ಬದಲಾಯಿಸೋಣ' ಎಂದು ಸಮಾಧಾನ ಪಡಿಸುವ ಪ್ರಯತ್ನ ಮಾಡಿದ್ದಾರೆ. ಸಂಪುಟ ವಿಸ್ತರಣೆ ವೇಳೆ ಎದುರಿಸಿದ ಅಸಮಾಧಾನ, ಒತ್ತಡಗಳನ್ನು ಇತ್ತೀಚೆಗೆ ನಿವಾರಿಸಿಕೊಂಡಿದ್ದ ಸಿಎಂ ಈಗ ಖಾತೆ ಹಂಚಿಕೆ ಅಸಮಾಧಾನ ಶಮನಕ್ಕೆ ಕಸರತ್ತು ನಡೆಸಿದ್ದಾರೆ. ಅಲ್ಲದೇ, ಅತೃಪ್ತರನ್ನು ಮಧ್ಯಾಹ್ನ ಕರೆಸಿ ಮನವೊಲಿಸುವ ಪ್ರಯತ್ನವನ್ನೂ ಮಾಡಿದ್ದಾರೆ. ಖಾತೆ ಹಂಚಿಕೆಗೆ ಸಚಿವರಾದ ಮಾಧುಸ್ವಾಮಿ, ಸುಧಾಕರ್, ಎಂಟಿಬಿ ನಾಗರಾಜ್ ಅಸಮಾಧಾನ ವ್ಯಕ್ತಪಡಿಸಿದರೆ, ಉಮೇಶ್ ಕತ್ತಿ, ಅರವಿಂದ ಲಿಂಬಾವಳಿ, ನಿರಾಣಿ ಒಪ್ಪಿಕೊಂಡಿದ್ದಾರೆ.

**ಸಂಪುಟ ಸಭೆಗೆ ಚಕ್ಕರ್:** ಸಚಿವ ಮಾಧುಸ್ವಾಮಿ ಅವರ ಬಳಿ ಇದ್ದ ಕಾನೂನು ಮತ್ತು ಸಂಸದೀಯ ವ್ಯವಹಾರ, ಸಣ್ಣ ನೀರಾವರಿ ಎರಡೂ ಖಾತೆಗಳನ್ನು ವಾಪಸ್ ಪಡೆದು, ವೈದ್ಯಕೀಯ ಶಿಕ್ಷಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ನೀಡಿರುವುದಕ್ಕೆ ಬೇಸರಗೊಂಡು ತುಮಕೂರಿನಲ್ಲಿ ನಡೆದ ಸಿದ್ಧಗಂಗಾ ಶ್ರೀಗಳ ಪುಣ್ಯಸ್ಮರಣೆ ಹಾಗೂ ಸಂಪುಟ ಸಭೆಯಿಂದ ದೂರ ಉಳಿದರು. ಸಣ್ಣ ನೀರಾವರಿ ವಾಪಸ್ ಪಡೆಯುವುದಾದರೆ, ಸಚಿವ ಸ್ಥಾನ ಬೇಡ, ನಾನೇನೂ ಬಂಡಾಯ ಏಳುವುದಿಲ್ಲ ಎಂದು ಮಾಧುಸ್ವಾಮಿ ಸಿಎಂ ಬಳಿ ಹೇಳಿದ್ದಾರೆ ಎನ್ನಲಾಗಿದೆ.

▶ 7ನೇ ಪುಟಕ್ಕೆ

### ಯಾರಿಗೆ ಏಕೆ ಅಸಮಾಧಾನ?

**ಡಾ.ಕೆ. ಸುಧಾಕರ್**



- ಕೊರೊನಾ ನಿಯಂತ್ರಣದಲ್ಲಿ ಬಿಜೆಪಿ ವರಿಷ್ಠರೇ ಮೆಚ್ಚುಗೆ ವ್ಯಕ್ತಪಡಿಸಿದ್ದು, ಈಗ ಒಂದು ಖಾತೆ ವಾಪಸ್ ಪಡೆದಿರುವುದು
- ಈಗ ಕಾರಣ ಇಲ್ಲದೆ ಖಾತೆ ವಾಪಸ್ ಪಡೆದಿರುವುದು.

**ಎಂಟಿಬಿ**



- ಪ್ರಮುಖ ವಸತಿ ಖಾತೆ ಬಿಟ್ಟು ವಲಸೆ ಬಂದಿದ್ದು,
- ಒಂದು ವರ್ಷ ಕಾದರೂ ನಿರೀಕ್ಷಿತ ಖಾತೆ ನೀಡದೆ ಜನ ಸಂಪರ್ಕವಿಲ್ಲದ ಅಬಕಾರಿ ಖಾತೆ ನೀಡಿರುವುದು.

**ಮಾಧುಸ್ವಾಮಿ**



- ತಮ್ಮ ಸ್ವಂತ ಊರು ಚೆಸಿ ಪುರದಲ್ಲಿ 1200 ಕೋಟಿ ರೂ. ಯೋಜನೆ ಪೂರ್ಣಗೊಳಿಸಲು ಸಣ್ಣ ನೀರಾವರಿ ಖಾತೆ ಮುಂದುವರಿಸಬೇಕೆಂಬ ಮನವಿಗೆ ನಕಾರ
- ತನಗೆ ತಿಳಿವಳಿಕೆ ಇಲ್ಲದ ವೈದ್ಯಕೀಯ ಶಿಕ್ಷಣ ಖಾತೆ ನೀಡಿದ್ದು

### ಯಾರಿಗೆ ಪ್ಲಸ್, ಯಾರಿಗೆ ಮೈನಸ್?



- **ಬಸವರಾಜ್ ಬೊಮ್ಮಾಯಿ:** ಗೃಹ ಜೊತೆಗೆ ಕಾನೂನು ಮತ್ತು ಸಂಸದೀಯ ವ್ಯವಹಾರ
- **ಸಿ.ಸಿ. ಪಾಟೀಲ್:** ಗಣಿ ಖಾತೆ ಬದಲು, ಸಣ್ಣ ಕೈಗಾರಿಕೆ ಮತ್ತು ವಾರ್ತಾ ಇಲಾಖೆ
- **ಕೋಟ ಶ್ರೀನಿವಾಸ ಪೂಜಾರಿ:** ಮೀನುಗಾರಿಕೆ ಬದಲು ಹಿಂದುಳಿದ ವರ್ಗ



- **ಡಾ.ಕೆ. ಸುಧಾಕರ್:** ವೈದ್ಯಕೀಯ ಶಿಕ್ಷಣ ವಾಪಸ್
- **ಪ್ರಭು ಚೌವ್ಹಾಣ್:** ಹಜ್ ಮತ್ತು ವಕ್ಫ್ ಖಾತೆ ವಾಪಸ್

**ಮಾಧುಸ್ವಾಮಿ, ಗೋಪಾಲಯ್ಯ ಎಲ್ಲರೂ ಸಮಾಧಾನದಿಂದಿದ್ದಾರೆ. ಯಾರಿಗೂ ಅಸಮಾಧಾನವಾಗಿಲ್ಲ. ಸಣ್ಣಪುಟ್ಟ ಅಸಮಾಧಾನವಿರಬಹುದು. ಅವರೆಲ್ಲರನ್ನೂ ಕರೆದು ಮಾತನಾಡುತ್ತೇನೆ. ಅವರು ಸ್ವಲ್ಪ ದಿವಸ ಕೆಲಸ ಮಾಡಲಿ. ಸರಿ ಹೋಗಲಿಲ್ಲ ಅಂದರೆ ಆಮೇಲೆ ಉತ್ತಮ ಖಾತೆ ನೀಡೋಣ.**

**• ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ**

9

# ಅತೃಪ್ತಿಯ ಹಂಚಿಕೆ

22/11/21

1ನೇ ಪುಟದಿಂದ ▶ ಆದರೆ, ಮುಖ್ಯಮಂತ್ರಿ ಬಿಎಸ್‌ವೈ, ಸಣ್ಣನೀರಾವರಿ ಇಲಾಖೆಯ ವಿಷಯದಲ್ಲಿನಾನು ಅಸಹಾಯಕ ಎಂದು ಹೇಳಿ ಮಾಧುಸ್ವಾಮಿ ಮನವೊಲಿಸಿದ್ದಾರೆಂದು ತಿಳಿದು ಬಂದಿದೆ. ಬಳಿಕ ಸ್ಪಷ್ಟೀಕರಣ ನೀಡಿದ ಮಾಧುಸ್ವಾಮಿ, ಖಾತೆ ವಾಪಸ್ ಪಡೆದಿರುವುದು ಬೇಸರವಾಗಿದೆ ಎಂದು ಹೇಳಿದ್ದಾರೆ.

ವಸತಿ ಖಾತೆಗೆ ಬೇಡಿಕೆ ಇಟ್ಟಿದ್ದ ಎಂ.ಟಿ. ಬಿ ನಾಗರಾಜ್ ಅವರಿಗೆ ಅಬಕಾರಿ ಖಾತೆ ನೀಡಿರುವುದು ಬೇಸರ ಉಂಟುಮಾಡಿದೆ. ಖಾತೆ ಹಂಚಿಕೆಯ ಅಧಿಕೃತ ಆದೇಶ ಹೊರ ಬೀಳುವ ಮುನ್ನ ಗುರುವಾರ ಬೆಳಗ್ಗೆಯೇ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ತಮಗೆ ಅಬಕಾರಿ ಖಾತೆ ಬೇಡ, ನೀಡಿದರೆ ವಸತಿ ಖಾತೆ ನೀಡಿ. ಇಲ್ಲದಿದ್ದರೆ, ಅದಕ್ಕಿಂತ ಒಳ್ಳೆಯ ಬೇರೆ ಖಾತೆ ನೀಡಿ ಎಂದು ಆಗ್ರಹಿಸಿದ್ದರು. ಸಚಿವ ಗೋಪಾಲಯ್ಯ ಅವರು ಖಾತೆ ಬದಲಾಯಿಸಿರುವುದಕ್ಕೆ, ಡಾ.ಸುಧಾಕರ್ ತಮ್ಮ ಹೆಚ್ಚುವರಿಯಾಗಿದ್ದ ವೈದ್ಯಕೀಯ ಶಿಕ್ಷಣ ಖಾತೆಯನ್ನು ವಾಪಸ್ ಪಡೆದಿದ್ದಕ್ಕೆ ಸಿಎಂ ವಿರುದ್ಧ ಮುನಿಸಿಕೊಂಡಿದ್ದಾರೆ.

**ಪ್ರತ್ಯೇಕ ಸಭೆ:** ಅಸಮಾಧಾನಗೊಂಡ ಎಂ.ಟಿ.ಬಿ. ನಾಗರಾಜ್, ನಾರಾಯಣಗೌಡ, ಗೋಪಾಲಯ್ಯ ಜತೆ ಡಾ. ಸುಧಾಕರ್ ತಮ್ಮ ನಿವಾಸದಲ್ಲಿ ಪ್ರತ್ಯೇಕ ಸಭೆ ನಡೆಸಿದ್ದಾರೆ. ಸುಧಾಕರ್ ಭೇಟಿಗೆ ಮುನ್ನ ಮೂವರೂ ಸಚಿವ ರಮೇಶ್ ಜಾರಕಿಹೊಳಿ ಅವರನ್ನು ಭೇಟಿ ಮಾಡಿ ಬೇಸರ ವ್ಯಕ್ತಪಡಿಸಿದ್ದಾರೆ. ನಾರಾಯಣಗೌಡ ಹಾಗೂ ಗೋಪಾಲಯ್ಯ ಅವರಿಗೆ ತಮಗೆ ನೀಡಿದ್ದ ಖಾತೆಯಲ್ಲಿ ಒಂದು ವರ್ಷದಲ್ಲಿ ಮಾಡಿರುವ ಸಾಧನೆಯ ಪಟ್ಟಿ ಸಿದ್ಧಪಡಿಸಿ ಆಗ ಮುಖ್ಯಮಂತ್ರಿ ಎದುರು ಕೇಳಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

### ಸಿಎಂ. ಖಾತೆಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಹಣಕಾಸು, ಇಂಧನ, ಬೆಂಗಳೂರು ನಗರಾಭಿವೃದ್ಧಿ, ಗುಪ್ತಚರ, ಸಂಪುಟ ವ್ಯವಹಾರ, ಯೋಜನೆ ಮತ್ತು ಸಾಂಖ್ಯಿಕ, ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಸಚಿವರಿಗೆ ಹಂಚಿಕೆಯಾಗದೇ ಉ[illegible]ವ ಎಲ್ಲ ಖಾತೆಗಳು.

### ಅಸಮಾಧಾನ ಬಳಿಕ ಯಾರು ಎಲ್ಲಿದ್ದರು?

ಸುಧಾಕರ್, ಸಂಪುಟ ಸಭೆಗೂ ತೆರಳದೆ ತಮ್ಮ ಮನೆಯಲ್ಲೇ ಇದ್ದರೆ, ಸಂಪುಟಕ್ಕೆ ಗೈರಾದ ಎಂ.ಟಿ.ಬಿ. ನಾಗರಾಜ್, ಗೋಪಾಲಯ್ಯ ಅವರು ಸುಧಾಕರ್ ಮನೆಗೆ ತೆರಳಿ ಮಾತು ಕತೆ ನಡೆಸಿದರು. ಮಾಧುಸ್ವಾಮಿ ತುಮಕೂರಿನಲ್ಲೇ ವಾಸ್ತವ್ಯ.

### ಅಸಮಾಧಾನಕ್ಕೆ ಕಾರಣವೇನು?

**ಗೋಪಾಲಯ್ಯ**

- ಕೊರೊನಾ ಸಂದರ್ಭದಲ್ಲಿ ಉತ್ತಮ ನಿರ್ವಹಣೆಗೆ ಮೆಚ್ಚುಗೆ
- ಯಾವುದೇ ಆರೋಪ, ಲೋಪ ಇಲ್ಲದಿದ್ದರೂ ಖಾತೆ ಬದಲಾಯಿಸಿದ್ದು.

**ನಾರಾಯಣಗೌಡ**

- ಕೊಟ್ಟಿರುವ ಖಾತೆಯಲ್ಲಿ ಉತ್ತಮ ಕೆಲಸ ನಿರ್ವಹಿಸುತ್ತಿದ್ದು. ತೋಟಗಾರಿಕೆ ಇಲಾಖೆಯಲ್ಲಿ ಹೊಸ ಪ್ರಯೋಗ ಗಳ ನಡೆಸಲಾಗುತ್ತಿತ್ತು. ಅಲ್ಪ ಸಮಯದಲ್ಲೇ ಖಾತೆ ಬದಲಾವಣೆ
- ಹಜ್, ವಕ್ಫ್ ಖಾತೆ ನೀಡಿರುವುದು